5.	ವಿತರಣಾ ನಾಲೆ	15.00
6.	ಕರಗಡ ಏತ ನೀರಾವರಿ ಯೋಜನೆ	2.00
7.	ಕ್ಯಾತನಹಳ್ಳಿ ಏತ ನೀರಾವರಿ ಯೋಜನೆ	15.00
	ಒಟ್ಟು	108.00

ಅ) ಈ ಯೋಜನೆಯಿಂದ 4.75 ಟಿ.ಎಂ.ಸಿ. ನೀರನ್ನು ಬಳಸಿಕೊಂಡು 37,000 ಎಕರೆ ಅಥವಾ 14,974 ಹೆಕ್ಟೇರ್ ಪ್ರದೇಶಕ್ಕೆ ನೀರು ಒದಗಿಸಲಾಗುತ್ತದೆ.

By utilising 4.75 TMC of water, 37,000 acres or 14,974 Ha of land will be irrigated.

ಇ) ಹಾಸನ ವಿಧಾನ ಸಭಾ ಕ್ಷೇತ್ರದ ಈ ಕೆಳಕಂಡ ಹೋಬಳಿಗಳಿಗೆ ಯಗಚಿ ಯೋಜನೆಯಿಂದ ನೀರನ್ನು ಒದಗಿಸಲು ಉದ್ದೇಶಿಸಿದೆ :-

ಕಸಬಾ ಹೋಬಳಿ : 5,200 ಎಕರೆಗಳು
ಕಟ್ಟಾಯ ಹೋಬಳಿ : 15,250 ಎಕರೆಗಳು
ಶಾಂತಿ ಗ್ರಾಮ : 7,470 ಎಕರೆಗಳು
ಒಟ್ಟು : 27,920 ಎಕರೆಗಳು

ಬಿ.ಜಿ.ಎಂ.ಎಲ್ ನೌಕರರಿಗೆ ಹಳದಿ ಪಡಿತರ ಚೀಟಿಗಳು

131 (891) ಶ್ರೀ ಎಂ. ಭಕ್ತವತ್ಸಲಂ (ಕೆ.ಜಿ.ಎಫ್) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಿ.ಜಿ.ಎಂ.ಎಲ್. ಸಂಸ್ಥೆಯನ್ನು ಮುಚ್ಚಿರುವ ಕಾರಣದಿಂದ 4000 ನೌಕರರು ಯಾವುದೇ ಆದಾಯ ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಆ) ಸರ್ಕಾರವು ರಚಿಸಿದ ಅಧ್ಯಯನ ತಂಡವು ಬಿ.ಜಿ.ಎಂ.ಎಲ್. ನೌಕರರಿಗೆ ಹಳದಿ ಪಡಿತರ ಚೀಟಿಯನ್ನು ವಿತರಿಸಲು ಶಿಫಾರಸ್ಸು ಮಾಡಿರುವುದೇ ;

ಇ) ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮವೇನು ;

ಈ) ಈ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ವಿಳಂಬವಾಗಿರುವುದಕ್ಕೆ ಕಾರಣಗಳೇನು ?

ಶ್ರೀ ರಾಮಲಿಂಗರೆಡ್ಡಿ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು) :

ಅ) ಬಿ.ಜಿ.ಎಂ.ಎಲ್. ಸಂಸ್ಥೆಯು ಮುಚ್ಚಲ್ಪಟ್ಟಿರುವುದರಿಂದ ಅದರ ನೌಕರರಿಗೆ ಸಂಬಳವು ಪಾವತಿಯಾಗುತ್ತಿಲ್ಲ ಎಂದು ತಿಳಿದು ಬಂದಿದೆ.

ಆ) ಅಧ್ಯಯನ ತಂಡವು ಸಹಾಯಧನಯುಕ್ತ ಆಹಾರಧಾನ್ಯಗಳನ್ನು ಕೆಲಸವನ್ನು ಕಳೆದುಕೊಂಡ ನೌಕರರಿಗೆ ಒದಗಿಸಬೇಕೆಂದು ಶಿಫಾರಸ್ಸು ಮಾಡಿದೆ.

ಇ) ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ನ್ಯಾಯಬೆಲೆ ಅಂಗಡಿಯೊಂದನ್ನು ನೌಕರರ ಕಾಲೋನಿಯಲ್ಲಿ ತೆರೆದು, ಬಿಜಿಎಂಎಲ್ ಸಂಸ್ಥೆಯು ನೀಡಿದ್ದ ಪಡಿತರ ಚೀಟಿಯ ಆಧಾರದ ಮೇಲೆ ಆಹಾರಧಾನ್ಯಗಳನ್ನು ಒದಗಿಸಲಾಗುತ್ತಿದೆ. ಜಿಲ್ಲಾಧಿಕಾರಿಗಳು ಸಮೀಕ್ಷೆ ನಡೆಸಿ 1647 ಕುಟುಂಬಗಳನ್ನು ಸಹಾಯಧನಯುಕ್ತ ಆಹಾರಧಾನ್ಯಗಳ ಹಂಚಿಕೆಗೆ ಗುರುತಿಸಿರುತ್ತಾರೆ. ಈ ವಿಷಯವು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಈ) ಬಿಜಿಎಂಎಲ್ ನೌಕರರ ಪ್ರಕರಣವು ಪ್ರಸ್ತುತ ಇರುವ ಸರ್ಕಾರದ ನೀತಿ ಮತ್ತು ಮಾರ್ಗಸೂಚಿಗಳ ವ್ಯಾಪ್ತಿಯಡಿಯಲ್ಲಿ ಬರುವುದಿಲ್ಲವಾದ್ದರಿಂದ ತಡವಾಗಿರುತ್ತದೆ.

ಶಿರಹಟ್ಟಿ ತಾಲ್ಲೂಕಿನಲ್ಲಿ ಬೆಳೆ ವಿಮೆಯೋಜನೆ

132 (1288) ಶ್ರೀ ಗಡ್ಡದೇವರಮಠ ಗದ್ದಯ್ಯ ಶಿವಮೂರ್ತಯ್ಯ (ಶಿರಹಟ್ಟಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗದಗ್ ಜಿಲ್ಲೆ ಶಿರಹಟ್ಟಿ ತಾಲ್ಲೂಕು ರೈತರಿಗೆ ಬೆಳೆ ವಿಮೆ ಯೋಜನೆ ಅನ್ವಯವಾಗದಿರಲು ಕಾರಣಗಳೇನು ?

ಆ) ಬೆಳೆ ವಿಮೆ ಯೋಜನೆಯಿಂದ ಶಿರಹಟ್ಟಿ ತಾಲ್ಲೂಕಿನ ರೈತರು ವಂಚಿತರಾಗಿದ್ದಕ್ಕೆ ಹೊಣೆಗಾರರು ಯಾರು ?

ಇ) ಹೊಣೆಗಾರರಾದ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗುವುದು ?

ಈ) ಈ ಯೋಜನೆಯಿಂದ ವಂಚಿತರಾದ ರೈತರಿಗೆ ಅನುಕೂಲವಾಗುವಂತೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುವುದು ?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು) :

ಅ) ಗದಗ್ ಜಿಲ್ಲೆ ಶಿರಹಟ್ಟಿ ತಾಲ್ಲೂಕಿನ ರೈತರನ್ನು ಬೆಳೆ ವಿಮಾ ಯೋಜನೆಯ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಆ) ಶಿರಹಟ್ಟಿ ತಾಲ್ಲೂಕಿನ ರೈತರನ್ನು ಬೆಳೆ ವಿಮೆ ವ್ಯಾಪ್ತಿಗೆ ಒಳಪಡಿಸಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಅಂಗನವಾಡಿ ಕಾರ್ಯಕರ್ತೆಯರ ಹುದ್ದೆಗಳ ಭರ್ತಿ

133 (1286) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಂಗನವಾಡಿ ಕೇಂದ್ರಗಳಲ್ಲಿ ಸಹಾಯಕಿಯಾಗಿ ಕೆಲಸ ನಿರ್ವಹಿಸುತ್ತಿರುವವರಿಗೆ ಆಯಾ ಕೇಂದ್ರಗಳಲ್ಲಿ ಕಾರ್ಯಕರ್ತೆಯರ ಹುದ್ದೆ ತೆರವಾದಾಗ ವಿದ್ಯಾರ್ಹತೆ ಯುಳ್ಳ ಸಹಾಯಕಿಯರು ಅರ್ಜಿ ಸಲ್ಲಿಸಿದಾಗ ಅವರಿಗೆ ಆದ್ಯತೆ ನೀಡಲಾಗುವುದೇ ?

ಆ) ನೀಡುವುದಾದಲ್ಲಿ, ತತ್ಸಂಬಂಧವಾದ ಆದೇಶವನ್ನು ಯಾವಾಗ ಹೊರಡಿಸಲಾಗುವುದು ?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

ಅ) ಸಹಾಯಕಿಯರಿಗೆ ಆದ್ಯತೆಯನ್ನು ನೀಡಲಾಗುವುದು

ಆ) ಈಗಾಗಲೇ ಇದಕ್ಕೆ ಸಂಬಂಧಪಟ್ಟ ಸುತ್ತೋಲೆ ಸಂ : ಡಿಡಬ್ಲೂ ಸಿ : ಐಸಿಡಿ : ಎಎನ್‌ಜಿಇ : 01-02 ದಿನಾಂಕ : 18.2.02 ರಂದು ಹೊರಡಿಸಲಾಗಿದೆ.

ಸಿಂಧನೂರು ತಾಲ್ಲೂಕಿನ ಸಿರನಗುಡಿ ಪಿಕಪ್ ಡ್ಯಾಂ ಕಾಮಗಾರಿ ಕುರಿತು

134 (839) ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?